ಅವಳು ತನ್ನಿಷ್ಟದಂತೆ ಜೀನ್ಸ್, ಸ್ಕರ್ಟು, ಮಿಡಿ ಎಲ್ಲ ತೊಟ್ಟು ಊರೆಲ್ಲ ತಿರುಗಾಡುವುದು ಸರಿಯಾ? ಮೊದಲೊಮ್ಮೆ ನಮ್ಮ ಬಿಲ್ಡಿಂಗಿನ ಗೋಡೆಯಲ್ಲೆಲ್ಲ ಅವಳ ಬಗ್ಗೆ ಯಾರೋ ಬರೆದು ಹಾಕಿದ್ದು ನೆನಪಿದೆಯೇ? ಪುನಃ ಅದೆಲ್ಲ ರಿಪೀಟ್ ಆಗುವುದು ಬೇಡ. ಆದಷ್ಟು ಬೇಗ ಸಂಧಾನ ಮಾಡಿಸಿ ಅವಳನ್ನು ಗಂಡನ ಮನೆ ಸೇರಿಸಿ'' ಎಂದರೊಬ್ಬರು. ''ಅವಳನ್ನು ನೋಡಿದರೆ ಡೈವೋರ್ಸ್ ಆದವಳ ಹಾಗೆ ಕಾಣಿಸುತ್ತಾಳಾ? ಆರಾಮವಾಗಿ ಅಪ್ಪನ ಹಿಂದೆ ಬೈಕಿನಲ್ಲಿ ಕುಳಿತು ಪಾನಿಪುರಿ ತಿನ್ನಲು ಹೋಗುತ್ತಾಳೆ. ಗಂಡನ ಮನೆಯ ಕಟ್ಟುಪಾಡು ನೀತಿನಿಯಮ ಆಕೆಗೆ ಸರಿಹೊಂದಲಿಲ್ಲ. ಇಲ್ಲಿ ಸಂತೋಷದಿಂದ ಹಗ್ಗ ಕಳಚಿದ ಹಾಗೆ ಇದ್ದಾಳೆ. ಅಪ್ಪನಿಗಾದರೂ ಅಲ್ಪಸ್ವಲ್ಪ ಹೊಣೆಗಾರಿಕೆ ಬೇಡವೇ? ಅವರಿಗೂ ಹೆಂಡತಿ ತೀರಿ ಹೋದ ಮೇಲೆ ಯಾವುದು ಸರಿ, ಯಾವುದು ತಪ್ಪು ಎನ್ನುವ ವಿವೇಕವೇ ಕಳೆದುಹೋಗಿದೆ'' ಎಂದರು ಇನ್ನೊಬ್ಬರು. ''ಸ್ವಲ್ಪ ದಿನ ಗೌರಿಯ ಹಿಂದೆ ಹೋದಿರಿ. ಈಗ ಗಂಡನಮನೆಯಲ್ಲಿ ಮುನಿಸಿಕೊಂಡಿದ್ದ ಮಗಳನ್ನೇ ಮನೆಗೆ ಕರೆದು ತಂದಿದ್ದೀರಿ. ಏನು ನಿಮ್ಮ ಆಲೋಚನೆ?'' ಎಂದು ಇನ್ನೊಬ್ಬರು ಹೇಳುವಷ್ಟರಲ್ಲಿ ಕೊತಕೊತ ಕುದಿಯುತ್ತಿದ್ದ ಜೀಕೆ ಮೇಲೆದ್ದು, ''ಸ್ಟಾಪ್ ದ ನಾನ್ಸೆನ್ಸ್. ಅದು ನನ್ನ ಮನೆ, ನನ್ನ ಮಗಳು. ವಿಚಾರಣೆ ಮಾಡಲು ನೀವು ಯಾರು? ಇನ್ನೊಂದು ಮಾತು ಯಾರಾದರೂ ಆಡಿದರೆ ಹಲ್ಲುದುರಿಸುತ್ತೇನೆ'' ಎಂದು ಹೇಳಿ ಕುರ್ಚಿ ನೂಕಿ ಎದ್ದು ಬಂದರು ಜೀಕೆ.

ಕಮಿಟಿ ಮೀಟಿಂಗು ಅಲ್ಲೇ ನಿಂತು ಹೋಯಿತು. ''ಡೈವೋರ್ಸು ಬೇಡ, ಸಮಾಧಾನ ಮಾಡಿ ಕಳುಹಿಸಿ ಎಂದದ್ದೇ ಅಪರಾಧವಾಯಿತು'' ಎನ್ನುತ್ತ ಕಮಿಟಿ ಸದಸ್ಯರು ಎದ್ದು ನಡೆದರು. ''ಒಟ್ಟಾರೆ ಅಪ್ಪ ಮಗಳಿಗೆ ಹೇಳೋರು ಕೇಳೋರು ಯಾರೂ ಇಲ್ಲಾಂತಾಗಿದೆ. ಇವರನ್ನು ನೋಡಿ, ನಮ್ಮ ಮಕ್ಕಳೂ ಹಾಳಾಗದಿದ್ದರೆ ಸಾಕು. ಸಣ್ಣ ಕಸದ ತೊಟ್ಟಿ ಕಾರಿಡಾರಿನಲ್ಲಿ ಕಂಡರೆ ಸಾಕು, ಇದು ನಮ್ಮ ಸಂಸ್ಕಾರವಾ ಎಂದು ಆಕ್ಷೇಪ ಎತ್ತುವ ನಮ್ಮ ಸೊಸೈಟಿಯವರು ಅಪ್ಪ ಮಗಳು ಜೋಡಿ ಹಕ್ಕಿಗಳಂತೆ ಹಾರಾಡುವುದನ್ನು ನೋಡುತ್ತ ಸುಮ್ಮನೆ ಕುಳಿತಿದ್ದಾರೆ'' ಇಂದಿರಾರ ಕಮೆಂಟುಗಳು ಬಿಲ್ಡಿಂಗಿನ ಹೆಂಗಸರ ನಡುವೆ ಅಡ್ಡಾದಿಡ್ಡಿ ದಾರಿತಪ್ಪಿ ಹರಿಯತೊಡಗಿದ್ದವು. ಕಮಿಟಿಗೆ ಏನು ಮಾಡಲಾಗುತ್ತೆ ಎಂದರು ಕೆಲವರು. ಕಮಿಟಿಯದ್ದು ಅಧಿಕ ಪ್ರಸಂಗತನ ಎಂದರು ಇನ್ನು ಕೆಲವರು. ಮೊದಲ ಬಾರಿಗೆ ಬಿಲ್ಡಿಂಗಿನಲ್ಲಿ ಎರಡು ಗುಂಪುಗಳಾದವು.

ಜೀಕೆಯವರ ಫ್ಲ್ಯಾಟು ಇದ್ದದ್ದು ನಾಲ್ಕು ಅಂತಸ್ತಿನ ದೊಡ್ಡ ಬಿಲ್ಡಿಂಗಿನಲ್ಲಿ. ಅದರಲ್ಲಿ ಒಟ್ಟು ಮೂವತ್ತಾರು ಫ್ಲ್ಯಾಟುಗಳು. ಗೋಪಾಲಕೃಷ್ಣ ಉರುಫ್ ಜೀಕೆ ಅಲ್ಲಿ ನೂರೊಂದನೇ ನಂಬರಿನ ಫ್ಲ್ಯಾಟಿನ ಮಾಲೀಕ. ಆ ಬಿಲ್ಡಿಂಗಿನಲ್ಲಿ ಹೆಚ್ಚಾಗಿ ಎಲ್ಲ ಫ್ಲ್ಯಾಟುಗಳಲ್ಲೂ ಮಾಲೀಕರೇ ವಾಸವಿದ್ದರು. ಬಾಡಿಗೆಗಿದ್ದ ಕೆಲವರು ಕೂಡ ಕಳೆದ ಹಲವು ವರ್ಷಗಳಿಂದ ಅಲ್ಲಿಯೇ ಮಾಲೀಕರಂತೆಯೇ ನೆಲೆನಿಂತಿದ್ದರು. ಮನೆಗೆಲಸದವರು, ಸೆಕ್ಯುರಿಟಿ ಗಾರ್ಡುಗಳು ಕೂಡ ಹಳಬರೇ. ಹಾಗಾಗಿ ಅಲ್ಲಿ ಸುತ್ತಲೂ ಪರಿಚಯಸ್ಥರೇ. ಕಟ್ಟಡದ ಎದುರಿಗೆ ಹಾಕಿದ್ದ ಕಲ್ಲುಬೆಂಚುಗಳಲ್ಲಿ ಕುಳಿತ ಹಿರಿಯರು, ಹುಲ್ಲುಹಾಸಿನ ಮೇಲೆ, ಒಳರಸ್ತೆಯ ಬದಿಯಲ್ಲಿ ಅಥವಾ ಜಗಲಿಯಲ್ಲಿ ಕುಳಿತು ಹರಟುವ ಹೆಂಗಸರು, ಆಟ ಆಡುವ, ಸೈಕಲ್ ಬಿಡುವ ಮಕ್ಕಳು, ಬೈಕು ನಿಲ್ಲಿಸಿ ಹರಟುವ ಯುವಕರು, ಇವರನ್ನೆಲ್ಲ ನೋಡುತ್ತಿದ್ದರೆ ಇಡೀ ಬಿಲ್ಡಿಂಗು ನೂರು ನೂರಿಪ್ಪತ್ತು ಮಂದಿಯ ದೊಡ್ಡ ಕೂಡುಕುಟುಂಬ ಅನ್ನಿಸುತ್ತಿತ್ತು.

ಮೇಲ್ನೋಟಕ್ಕೆ ಬಿಲ್ಡಿಂಗಿನಲ್ಲಿ ಈ ರೀತಿಯ ಸುಂದರ ವಾತಾವರಣ ಕಂಡು ಬಂದರೂ ಆಗಾಗ ಅಲ್ಲಿ ಕುಟುಂಬಗಳ ನಡುವೆ ಮನಸ್ತಾಪಗಳೂ ಸಾಮಾನ್ಯವಾಗಿದ್ದವು. ಹತ್ತಾರು ವರ್ಷಗಳಿಂದ ಅಕ್ಕಪಕ್ಕದಲ್ಲಿ ವಾಸವಿದ್ದೂ ಜಗಳವಾಡಿ ಮಾತು ಬಿಟ್ಟ ಕುಟುಂಬಗಳಿದ್ದವು. ವಾಸವಿದ್ದವರ ನಡುವೆ